ಕೊಂಡೊಯ್ದಿರಬೇಕಲ್ವೆ?" ವೆಂಕಟೇಶನ ಪ್ರಶ್ನೆ.

"ಬಿದ್ದಪ್ಪ, ನಾಚಿಯಪ್ಪನ್ ನಿಂಗೆ ಗೊತ್ತಲ್ವಾ? ಲೋಕಲ್ ಪುಢಾರಿ. ಅವ್ನೇ ಇದ್ರ ಹಿಂದಿರೋ ಆಸಾಮಿ. ಕನ್ನಿವೆಂಕಟೇಶ, ಅದು ಅವರ ಕೈಗೆ ಸಿಕ್ಕಿಲ್ಲ. ಅದು ನನ್ನಲ್ಲಿ ಸುರಕ್ಷಿತವಾಗಿದೆ."

"ನಿನ್ಗೆ ಹೇಗ್ ಸಿಕ್ತು, ಕರಮಚಂದ್?" ನಾನು ಉದ್ವೇಗದಿಂದ ಕೇಳಿದೆ.

"ಅದು ಚಾರ್ಲಿಯ ಮನೆಯಲ್ಲಿ ಹೂದಾನಿಯಲ್ಲಿತ್ತು. ಚಾರ್ಲಿ ಹೂದಾನಿ ಮಾರಿದೆ ಎಂದಾಗ ವೆಂಕಟೇಶನು ಕಾವೇರಿ ಎಂಪೋರಿಯಂನ ಹಿಂದೆ ಹೋದ. ನನ್ಗೆ ಚಾರ್ಲಿಯ ಹಜಾರದಲ್ಲಿ ಒಂದು ಪುಟ್ಟ ಹೂದಾನಿ ಕಂಡಿತು. ಚಾರ್ಲಿಯ ಹೇಳಿಕೆಯಂತೆ, ಚಿದಾನಂದ ನಿನ್ಗೆ ಸಂದೇಶ ಕಳಿಸುವ ತನಕವೂ ಹಜಾರದಿಂದ ಕದಲಿರಲಿಲ್ಲ. ಹಾಗಾಗಿ, ಪಕ್ಕದ ಕೋಣೆಯಲ್ಲಿ ಹೂದಾನಿ ಇರೋ ವಿಚಾರ ಆತನಿಗೆ ಗೊತ್ತಿರುವ ಸಾಧ್ಯತೆಯೇ ಇಲ್ಲ. ಆದ್ದರಿಂದ ಅದನ್ನು ಹಜಾರದಲ್ಲಿದ್ದ ಹೂದಾನಿಯಲ್ಲೇ ಅಡಗಿಸಿದ್ದಾನೆ ಅಂತ ಊಹಿಸಿದೆ. ಜೊತೆಗೆ, ಪದ್ಯ ನೋಡು. 'ಇದೆ ಕಲ್ಲು ಮುಳ್ಳು'. ಹಜಾರದಲ್ಲಿದ್ದ ಹೂದಾನಿಯಲ್ಲಿ ಗುಲಾಬಿ ಹೂವು ಇತ್ತು. ಅದರ ಬುಡದಲ್ಲಿ ಬೆಣಚು ಕಲ್ಲುಗಳಿದ್ದವು. ಕಾವೇರಿ ಎಂಪೋರಿಯಂನಲ್ಲಿ ಉಳಿದೆರಡು ಹೂದಾನಿಗಳ ಫೋಟೊ ನೋಡಿದ್ದೆನಲ್ಲ. ಅವುಗಳಲ್ಲಿ ಒಂದರಲ್ಲಿ ಗುಲಾಬಿ ಹೂವು, ಇದ್ದರೂ ಕುಂಡದೊಳಕ್ಕೆ ಕಲ್ಲುಗಳಿರಲಿಲ್ಲ. ಅದೂ ನನ್ಗೆ ಸಹಾಯ ಮಾಡ್ತು."

"ಓಹ್. ನಾನು ಸ್ವಲ್ಪ ಚಾರ್ಲಿಯ ಹಜಾರದಲ್ಲಿ ಕಣ್ಣು ಹೊರಳಿಸ್ತಿದ್ರೆ ಷೋಕೇಸಲ್ಲಿದ್ದ ಹೂದಾನಿ ಕಾಣಿಸ್ತಿತ್ತೇನೊ! ನಾನು 'ಕಲ್ಲು ಮುಳ್ಳು' ಅಂದ್ರೆ ತೊಂದರೆಗಳು ಅಂತ ಅರ್ಥವಿಸಿಕೊಂಡಿದ್ದರಿಂದ, ಹೂದಾನಿಯಲ್ಲಿ ಕಲ್ಲುಮುಳ್ಳಿಗಾಗಿ ಹುಡುಕಾಡಲಿಲ್ಲ. ಈಗ ಚಿದಾನಂದ ಎಲ್ಲಿದ್ದಾನೆ ಅಂತ ಗೊತ್ತಾ?" ಕನ್ನಿವೆಂಕಟೇಶ ಪ್ರಶ್ನಿಸಿದ.

"ಕರಮಚಂದ ನಿನ್ಗೆ ಗಾಂಜಾ ಬಗ್ಗೆ ಹೇಗೆ ತಿಳಿಯಿತು? ನಿನ್ನೆ ರಾತ್ರಿ ನೀನು ಹೋದದ್ದೆಲ್ಲಿಗೆ?" ನಾನು ಪ್ರಶ್ನೆ ಸೇರಿಸಿದೆ.

"ಬಿದ್ದಪ್ಪ, ಚಾರ್ಲಿಯ ಮನೆಯಲ್ಲಿ ನೀನು ಪಕ್ಕದ ಕೋಣೆಯಲ್ಲಿ ಗಡಿಯಾರದ ಬಗ್ಗೆ ಚರ್ಚಿಸುತ್ತಿದ್ದಾಗ ನಾನು ಮೆಮೊರಿ ಕಾರ್ಡ್ ತೆಗೆದೆ. ಚಿದಾನಂದನ ಮೆಮೊರಿ ಕಾರ್ಡಿನಲ್ಲಿ ಗಾಂಜಾ ಬೆಳೆಯ ವಿಡಿಯೊ ಇದೆ. ಆದ್ರೆ ಆ ಬೆಳೆ ಇರೋ ತಾಣ ಮಾತ್ರ ಸರಿಯಾಗಿ ಗೊತ್ತಾಗಲಿಲ್ಲ. ಆ ವಿಡಿಯೊದಲ್ಲಿ ಒಮ್ಮೆ ಜೋಡು ಭಗವತಿ ದೇವಳದ ದ್ವಾರದ ಮುಗುಳಿ ಅಸ್ಪಷ್ಟವಾಗಿ ಕಾಣುತ್ತೆ. ಹಾಗಾಗಿ ಆ ಜಾಗ ಅಲ್ಲೆಲ್ಲೋ ಹತ್ತಿರದಲ್ಲೇ ಇರಬೇಕೆಂದು ಊಹಿಸಿದೆ. ನಿನ್ನೆ ತಂಗರಾಜು ಮನೆಗೆ ಬಂದ ಕಳ್ಳರು ಬಿಟ್ಟು ಹೋದ ಫಲಕ ಎಲ್ಲಾ ರಹಸ್ಯ ಹೇಳಿಬಿಟ್ಟಿತು. ಅದು ಕ್ರಾಸ್ ಲ್ಯಾಂಡ್ ಎಸ್ಟೇಟಿನ ಲಾಂಛನ. ನಾನು ಅದನ್ನು ಅನೇಕ ಬಾರಿ ಕಂಡಿದ್ದೆ. ಅದು ಇರುವುದು ಜೋಡು ಭಗವತಿ ದೇವಳದ ಸನಿಹದಲ್ಲೇ. ಹಾಗಾಗಿ, ನಾಚಿಯಪ್ಪನ್ ಈ ದಂಧೆಯಲ್ಲಿರೋ ಆಸಾಮಿ ಅಂತ ತಿಳಿಯಿತು. ನಿನ್ನೆ ರಾತ್ರಿ ಹೋಗಿ, ಅಲ್ಲೆಲ್ಲಾ ತಿರುಗಾಡಿ ಖಚಿತಪಡಿಸಿಕೊಂಡೆ. ಅಲ್ಲಿ ಒಂದು ಉಗ್ರಾಣ ಕೋಣೆಯಲ್ಲಿ ಚಿದಾನಂದನನ್ನು ಹಿಡಿದಿಟ್ಟಿದ್ದಾರೆ. ಈಗ ಅವ್ನು ಬರ್ತಾನೆ, ನಾಚಿಯಪ್ಪನ್ ಜೊತೆಯಲ್ಲಿ."

"ನಾಚಿಯಪ್ಪನ್ ಬರಲು ಸಮ್ಮತಿಸಿದ್ನೆ? ಅವ್ನು ಬಹಳ ಪ್ರಭಾವಿ ಮನುಷ್ಯ." ಕನ್ನಿವೆಂಕಟೇಶನ ಅನುಭವದ ನುಡಿ.

"ಅವ್ನು ಬರೋಲ್ಲ ಅಂತ ಗೊತ್ತು. ಕರೆದು ತರಲು ಸರ್ಕಲ್ ಇನ್‌ಸ್ಪೆಕ್ಟರ್ ಡಿಸೋಜನಿಗೆ ಹೇಳಿದೀನಿ. ಗಾಂಜಾ ಬೆಳೆದ ಹಾಗೂ ಅಕ್ರಮವಾಗಿ ವ್ಯಕ್ತಿಯನ್ನು ಬಂಧಿಸಿಟ್ಟ ಆರೋಪದ ಮೇಲೆ